<u>ಓ.ಎಸ್. – 85/2022</u>

ಡಿ. ಡಬ್ಲೂ – 1

<u>ಸಾಕ್ಷಿಯನ್ನು  ದಿಃ 04.04.2026  ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಆರ್.ಕೆ ರವರಿಂದ</u>**

**1.** ನನ್ನ ತಂದೆ ನಾಗಭಟ್ಟರಿಗೆ  ನಾನು ಸೇರಿ 3 ಗಂಡು ಹಾಗೂ 1 ಹೆಣ್ಣು ಮಕ್ಕಳು. ನಾನು ಹಾಗೂ ನನ್ನ ಸಹೋದರರರ ವಿಶ್ವಾಸದಿಂದ ಇದ್ದೇವೆ. ವಿಜಯಲಕ್ಷ್ಮಿ ಎಂದರೆ 1 ನೇ ಪ್ರತಿವಾದಿಯ ಹೆಂಡತಿಯಾಗಿದ್ದು,

ಅವರೂ ಸಹ ನನ್ನೊಂದಿಗೆ ಆತ್ಮ ವಿಶ್ವಾಸದಿಂದ ಇದ್ದಾರೆ. ನಿಪಿ-1 ರ ಮರಣ ಶಾಸನಕ್ಕೆ 1 ನೇ ಪ್ರತಿವಾದಿಯ ಹೆಂಡತಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆತವಾಡಿ ಗ್ರಾಮದ ಸರ್ವೇ ನಂಬರ್ 56 ರಲ್ಲಿ ನನಗೆ 1 ಎಕರೆ 29 ಗುಂಟೆ ಜಮೀನು ಇದೆ. ಸರ್ವೇ ನಂಬರ್ 56 ರಲ್ಲಿ 4 ಭಾಗಗಳಾಗಿದ್ದು, ನನ್ನ ತಾಯಿಯ ಹಿಸ್ಸೆಗೆ 1 ಎಕರೆ 20 ಗುಂಟೆ, 1 ಮತ್ತು 3 ನೇ ಪ್ರತಿವಾದಿಯರಿಗೆ ತಲಾ 1 ಎಕರೆ 29 ಗುಂಟೆ ಜಮೀನು ಬಂದಿದೆ. ನಮ್ಮ ನಮ್ಮ ಹಿಸ್ಸೆಗೆ ಬಂದ ಜಮೀನುಗಳು ಪೋಡಿಯಾಗಿವೆ. 1 ನೇ ಪ್ರತಿವಾದಿಯ ಹಿಸ್ಸೆಗೆ ಹೋದ ಜಮೀನನ್ನು ಅವರು ಮಾರಾಟ ಮಾಡಿದ್ದಾರೆ. ಸರ್ವೇ ನಂಬರ್ 56 ರಲ್ಲಿ ಬಂದ 1 ಎಕರೆ 29 ಗುಂಟೆ ಸ್ವತ್ತು ನನಗೆ ಹಿಸ್ಸೆ ಮೂಲಕ ಬಂದಿದೆ. ನನ್ನ ತಾಯಿ ಮಹಾಲಕ್ಷ್ಮೀ ರವರು ಅವರ ಹಿಸ್ಸೆಗೆ ಬಂದ ಸ್ವತ್ತನ್ನು ಗೀತಾ ಕೋಂ ಗಣಪತಿರವರಿಗೆ ನಿಪಿ-13 ರಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-13 ರ ಕಾಲಕ್ಕೆ ನಾನು ಹಾಜರು ಇರಲಿಲ್ಲ. 3 ನೇ ಪ್ರತಿವಾದಿ ಹಾಜರು ಇದ್ದರು. ನಿಪಿ-13 ರ ಹಿಂಭಾಗದಲ್ಲಿರುವ ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅದು ನನ್ನ ತಾಯಿಯ ಫೋಟೋ ಎಂದರೆ, ಇರಬಹುದು ಎನ್ನುತ್ತಾರೆ.

**2.** ನಿಪಿ-13 ರಲ್ಲಿ 1989-90 ರಲ್ಲಿ ಹಿಸ್ಸೆ ಆಗಿರುವುದಾಗಿ ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಜುಬಾನಿ ಹಿಸ್ಸೆ ಪತ್ರವಾಗಿರುತ್ತದೆ ಎನ್ನುತ್ತಾರೆ. ದಿನಾಂಕ 17.09.2010 ರಲ್ಲಿ ನನ್ನ ತಾಯಿ ನಿಪಿ-13 ರಂತೆ ಗೀತಾ ಕೋಂ ಗಣಪತಿರವರಿಗೆ 1 ಎಕರೆ 30 ಗುಂಟೆ ಸ್ವತ್ತನ್ನು ಮಾರಾಟ ಮಾಡಿದ್ದಾರೆ. ನಿಪಿ-13 ರಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತನ್ನು ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ನನ್ನ ತಾಯಿ ಸಹಿ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ತಾಯಿ ಸಹಿ ಮಾಡುತ್ತಿದ್ದ ಬಗ್ಗೆ ಪಿಎಲ್‌ಡಿ ಬ್ಯಾಂಕಿನ ಸಾಲ ಪಡೆದ ದಾಖಲೆಗಳು ಇವೆ. ಅಗತ್ಯವಿದ್ದರೆ ಅವುಗಳನ್ನು ಹಾಜರು ಪಡಿಸುತ್ತೇನೆ. 2010 ರಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತು ಮೂಲಕ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ನನ್ನ ತಾಯಿಯ ಹೆಬ್ಬೆಟ್ಟಿನ ಗುರುತನ್ನು ಗುರುತು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

**3.** 3 ನೇ ಪ್ರತಿವಾದಿ ತನ್ನ ಹಿಸ್ಸೆಗೆ ಬಂದ ಸರ್ವೇ ನಂಬರ್ 56 ರ 1 ಎಕರೆ 29 ಗುಂಟೆ ಸ್ವತ್ತನ್ನು ಗೀತಾ ಕೋಂ ಗಣಪತಿರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು ಈ ದಾವೆಯಲ್ಲಿ ನನ್ನ ಮತ್ತು 3 ನೇ ಪ್ರತಿವಾದಿಯ ಪರವಾಗಿ ಮಾತ್ರ ಸಾಕ್ಷ ನುಡಿಯುತ್ತಿದ್ದೇನೆ. 1 ನೇ ಪ್ರತಿವಾದಿ ದಾವೆಯಲ್ಲಿ ತಮ್ಮ ವಕೀಲರ ಮೂಲಕ ಹಾಜರಾಗಿ ದಾವಾ ಮಾಗಣಿಯನ್ನು ಒಪ್ಪಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ನನ್ನ ತಾಯಿಗೆ ನಿಪಿ–5 ರ ಮ್ಯೂಟೇಶನ್ ನಂತೆ ಬಂದಿದೆ ಎಂದರೆ, ಇರಬಹುದು. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತು ಹಾಗೂ ಇನ್ನೂ ಕೆಲವು ಸ್ವತ್ತುಗಳು ನಮಗೆ ಅದಲು ಬದಲು ಪತ್ರದ ಮೂಲಕ ಬಂದಿದೆ ಎನ್ನುತ್ತಾರೆ. ನಿಪಿ–5 ರಂತೆ ದಾವಾ ಸ್ವತ್ತು ಮರಣ ಶಾಸನದ ಮೂಲಕ ನನ್ನ ತಾಯಿಗೆ ಬಂದಿದೆ ಎಂದರೆ ಸರಿ.

**4.**ನಿಪಿ–7 ರ ಮರಣ ಪ್ರಮಾಣ ಪತ್ರವು ನನ್ನ ತಾಯಿಗೆ ಸೇರಿದ್ದು ಎಂದರೆ ಸರಿ. ನಿಪಿ–7 ರಲ್ಲಿ ನನ್ನ ತಾಯಿ ಮೃತ ಪಟ್ಟ ಸ್ಥಳವನ್ನು ಸಸಿತೋಟ, ಬ್ರಾಹ್ಮಣ ಕೆಪ್ಪಿಗೆ, ಕರೂರು ಹೋಬಳಿ ಎಂದು ಕಾಣಿಸಿದೆ ಎಂದರೆ ಸರಿ. ಮುಂದುವರೆದು ಅದು ನನ್ನ ಅಣ್ಣನ ಮನೆ ಎನ್ನುತ್ತಾರೆ. 1 ನೇ ಪ್ರತಿವಾದಿ ಸದರಿ ಸಸಿತೋಟ, ಬ್ರಾಹ್ಮಣ ಕೆಪ್ಪಿಗೆಯಲ್ಲಿ ಜಮೀನು ಮತ್ತು ಮನೆ ಇದೆ, ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಆ ಮನೆಗೆ ದಾಖಲೆಗಳು ಇರಬಹುದು. ನನ್ನ ತಾಯಿ ವಾದಿಯ ಮನೆಯಲ್ಲಿ ಮೃತಪಟ್ಟರು ಎಂದರೆ ಸರಿಯಲ್ಲ. ನನ್ನ ತಾಯಿ ಮೃತ ಪಡುವ 6 ತಿಂಗಳ ಮೊದಲಿನಿಂದ ಸಸಿತೋಟ, ಬ್ರಾಹ್ಮಣ ಕೆಪ್ಪಿಗೆಯಲ್ಲಿ 1 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದರು. ಕೆಲವು ದಿನಗಳವರೆಗೆ ಮೈಸೂರಿನಲ್ಲಿ ನನ್ನೊಂದಿಗೆ ಇದ್ದರು. ನಿಪಿ–4 ರಲ್ಲಿ ಕಾಣುವ ಫೋಟೋ ನನ್ನ ತಾಯಿಯದ್ದು.

**5.**ನನ್ನ ತಾಯಿ ನಿಪಿ–4 ರಂತೆ ಸರ್ಕಾರದ ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ಮಾಸಿಕ ಪಿಂಚಣಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತನ್ನು ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–4 ರಲ್ಲಿಯೂ ಸಹ ನನ್ನ ತಾಯಿಯ ವಿಳಾಸ ಸಸಿತೋಟ, ಬ್ರಾಹ್ಮಣ ಕೆಪ್ಪಿಗೆ ಎಂದು ಬರೆದಿದೆ ಎಂದರೆ ಸರಿ. ಮುಂದುವರೆದು ನನ್ನ ಅಣ್ಣನ ಮನೆಯಲ್ಲಿ ಇದ್ದುದ್ದರಿಂದ ಆ ವಿಳಾಸ ಕೊಟ್ಟಿರಬಹುದು ಎನ್ನುತ್ತಾರೆ. ಪಿ ಡಬ್ಲ್ಯೂ–2 ರವರು ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದಾಗ ನಾನು ಅವನನ್ನು ನೋಡಿದ್ದೇನೆ. ಅದಕ್ಕಿಂತ ಮೊದಲು ಅವನು ನನಗೆ ಪರಿಚಯ ಇರುವುದಿಲ್ಲ. ದಿನಾಂಕ 31.01.2022 ರಂದು ದಾವಾ ಸ್ವತ್ತನ್ನು ಬೇರೆಯವರ ಹೆಸರಿಗೆ ಖಾತೆ ಮಾಡದಂತೆ  ಹಾಗೂ ಮೃತರ ವಾರಸುದಾರರಾದ ನನ್ನ ಹಾಗೂ ನನ್ನ ಸಹೋದರರಿಗೆ ಖಾತೆ ಮಾಡುವಂತೆ ತಕರಾರನ್ನು ನೀಡಿದ್ದೆ ಎಂದರೆ ಸರಿ. ನನ್ನ ತಾಯಿ ಮೃತ ಪಡುವ 2 ದಿನಗಳ ಮೊದಲು ನಾನು ಅವರನ್ನು ನೋಡಿ ಅವರೊಂದಿಗೆ ಮಾತನಾಡಿದ್ದೇನೆ. ಸದರಿ ವಿಷಯ ಸುಳ್ಳಾಗಿದ್ದು, ನಾನು ನನ್ನ ತಾಯಿಯನ್ನು ನೋಡಿಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ನನ್ನನ್ನು ಗುರುತಿಸಿ ನನ್ನನ್ನು ಮಾತನಾಡಿದರು.

**6.** ದಾವಾ ಸ್ವತ್ತಿನ ಕುರಿತು ಮರಣ ಶಾಸನ ಆಗಿದೆ ಎಂದು ಈ ದಾವೆಯ ನೋಟೀಸ್ ಬಂದ ನಂತರ ನನಗೆ ತಿಳಿಯಿತು. ಸದರಿ ಮರಣ ಶಾಸನವನ್ನು ನಾನು ನೋಡಿದ್ದೇನೆ. ನಿಪಿ–1 ರ ಮೊದಲನೇ ಪುಟದ ಹಿಂಭಾಗದಲ್ಲಿರುವ ಮಹಾಲಕ್ಷ್ಮೀ ಎನ್ನುವವರ ಫೋಟೋ ನೋಡಿ, ಸಾಕ್ಷಿಯು ಬಹುಶಃ ಅದು ನನ್ನ ತಾಯಿಯ ಫೋಟೋ ಆಗಿರುವುದಿಲ್ಲ. ಆದರೆ ನನಗೆ ನಿಖರವಾಗಿ ಗುರುತಿಸಲು ಆಗುತ್ತಿಲ್ಲ. ಮರಣ ಶಾಸನಕ್ಕೆ ವಿಜಯಲಕ್ಷ್ಮಿರವರು ಸಹಿ ಮಾಡಿರುವುದನ್ನು ಅವರ ಮನೆಗೆ ಹೋಗಿ ಪ್ರಶ್ನೆ ಮಾಡಿಲ್ಲ. ಕಾರಣ ಈ ದಾವೆಯ ನೋಟೀಸ್ ಬಂದ ನಂತರ ನಾನು 1 ನೇ ಪ್ರತಿವಾದಿಯ ಮನೆಗೆ ಹೋಗುತ್ತಿಲ್ಲ. ನನ್ನ ತಾಯಿ ಮೃತ ಪಡುವ 6 ತಿಂಗಳ ಪೂರ್ವದಲ್ಲಿ ಅವರನ್ನು ನಾನು ಕರೆದುಕೊಂಡು ಹೋಗಿ ಮೈಸೂರಿನಲ್ಲಿ ನನ್ನೊಂದಿಗೆ ಇರಿಸಿಕೊಂಡಿದ್ದೆ. ಆಗ ನನ್ನ ತಾಯಿಯನ್ನು ನಾನು ಕಾರಿನಲ್ಲಿ ಕರೆದುಕೊಂಡು ಹೋಗಿದ್ದೇನೆ. ಕಾರಿನಲ್ಲಿ ನನ್ನ ತಾಯಿ ಅರಾಮವಾಗಿ ಕುಳಿತಿದ್ದರು. ಸ್ವಲ್ಪ ಸುಸ್ತಾಗಿದ್ದರು. ಹೋದ 1 ದಿನದಲ್ಲೇ ನನ್ನ ತಾಯಿ ಹುಷಾರಾಗಿ ಅವರ ಕೆಲಸವನ್ನು ಅವರೇ ಮಾಡುಕೊಳ್ಳುವವರಾಗಿದ್ದರು.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.